

ಎಚ್.ಎ.ಎಲ್. ಮ್ಯಾನೇಜ್‌ಮೆಂಟ್ ಅಕಾಡೆಮಿಯಲ್ಲಿ ಇಂದು 40ಕ್ಕೂ ಹೆಚ್ಚು ಲಕ್ಷ್ಮಿತರು ಮರಗಳು ಬೆಳೆಯುತ್ತಿವೆ

ತರಲಾಯಿತು. ವಿಶ್ವವಿದ್ಯಾಲಯ ತನ್ನ ದಶಕಗಳ ಸಂಶೋಧನಾ ಕಾರ್ಯದ ಮೂಲಕ, ಈ ಲಾಭದಾಯಕ ಹಾಗೂ ಪರಿಸರಪ್ರೇಮಿ ಮರವನ್ನು ಅಧಿಕವಾಗಿ ಬೆಳೆಸುವತ್ತ ರೈತರಿಗೆ ಉತ್ತೇಜನ ನೀಡಿದೆ. ಹೀಗಿದ್ದೂ, ಇಂದು ಕೂಡಾ ಲಕ್ಷ್ಮಿತರು ಕಷಾಯ ಕುಡಿಯಲು, ಕನಕಪುರ ರಸ್ತೆಯ 21ನೇ ಕಿ.ಮೀ.ಗೆ ಹೋಗಬೇಕಾಗಿದೆ. ನಮ್ಮ ಸುತ್ತಮುತ್ತ ಈ ಮರ ಕಾಣುತ್ತಿಲ್ಲ.

***

2019ರಲ್ಲಿ ನನ್ನ ಗೆಳತಿಯ 60ನೇ ವರ್ಷದ ಹುಟ್ಟುಹಬ್ಬವನ್ನು ಸಂಭ್ರಮದಿಂದ ಆಚರಿಸಿದೆವು. ಕಳೆದ ಎರಡು ವರ್ಷಗಳ ಆಕೆಯ ಪೆಟ್ ಸ್ಕ್ಯಾನ್ 'ಕ್ಲಿಯರ್' ಆಗಿ 'ಕ್ಯಾನ್ಸರ್ ಫ್ರೀ' ಇದೆ. ಇಂದು ಈ ಲೇಖನ ಬರೆಯುವ ಹೊತ್ತು ರಾಜು ನೆನಪಾಗಿ ಅವರ ತಂದೆಯನ್ನು ವಿಚಾರಿಸಿಕೊಳ್ಳಲು ಕಳೆದ ಮಾರ್ಚ್ 13ರಂದು ಆತನಿಗೊಂದು ಎಸ್.ಎಮ್.ಎಸ್. ಕಳುಹಿಸಿ, 'ರಾಜು ನಿಮ್ಮ ತಂದೆಯವರು ಹೇಗಿದ್ದಾರೆ?' ಎಂದು ಕೇಳಿದ್ದೆ. ಮನಸ್ಸಿನಲ್ಲಿ ಒಂದಿಷ್ಟು ಅಳುಕಿತ್ತು. ಇಸವಿ 2015ರಲ್ಲಿಯೇ ವೈದ್ಯರು ಭರವಸೆ ನೀಡದೆ ಮನೆಗೆ ಕಳುಹಿಸಿದ್ದರು. ತಂದೆ ಇದ್ದಾರೆಯೇ ಎಂಬ ಪ್ರಶ್ನೆ ಮೂಡಿತ್ತು. ತಕ್ಷಣ ರಾಜುವಿನಿಂದ ಫೋನ್ ಕರೆ ಬಂತು. 'ಮೇಡಂ ನನ್ನ ತಂದೆ ಓಡಾಡಿಕೊಂಡಿದ್ದಾರೆ. ತಮ್ಮ ಕೆಲಸ ತಾವು ಮಾಡಿಕೊಳ್ಳುತ್ತಾರೆ. ಅದರಾಚೆನ ನಿರೀಕ್ಷೆ ನಮಗಿಲ್ಲ' ಎಂದು ಆತ ಹೇಳಿದ. 'ಎಡ ಕಿವಿಯ ಕೆಳಗಿನ ಆ ದೊಡ್ಡ ಗಡ್ಡೆ ಕರಗಿಲ್ಲ. ಪವಾಡವೇನೂ ಆಗಿಲ್ಲ. ದೇಹವಿಡೀ ಕ್ಯಾನ್ಸರ್ ಹರಡಿದ ಕೇಸ್ ಆಗಿದ್ದರೂ, ಜೀವ ಉಳಿದಿದೆ' ಎಂದೂ ಹೇಳಿದ. 'ಮೇಡಂ, ನಮ್ಮ ತಂದೆಯವರದು ಸಾಧಾರಣ ಕ್ಯಾನ್ಸರ್ ಆಗಿದ್ದರೆ ವಾಸಿಯಾಗಿರುತ್ತಿತ್ತೇನೋ. ಅವರದು ಅಮೆಲೊಬ್ಲಾಸ್ಟೋಮಾ ಕ್ಯಾನ್ಸರ್, ಬಹಳ ಅಪರೂಪದ ರೋಗ' ಎಂದೂ ಹೇಳಿದ. ನನಗದು ನೆನಪಿತ್ತು.

ಆದರೆ ದಯವಿಟ್ಟು ಗಮನಿಸಿ. ನೀವೇನಾದರೂ ಕ್ಯಾನ್ಸರ್ ರೋಗಿಯಾಗಿದ್ದರೆ, ನಿಮ್ಮ ವೈದ್ಯರ ಜೊತೆಯಲ್ಲಿ ಚರ್ಚಿಸದೆ ಅಲೋಪತಿ ಚಿಕಿತ್ಸೆ

ಈ ಮರದ ಎಲೆ ಮತ್ತು ತೊಗಟೆಯ ಸಾರದಲ್ಲಿ ಬಹಳಷ್ಟು ಔಷಧೀಯ ಗುಣಗಳಿರುವುದು ದಾಖಲಾಗಿದೆ. ಇದು ಮಧ್ಯ ಮತ್ತು ದಕ್ಷಿಣ ಅಮೆರಿಕದ ಉಷ್ಣವಲಯದ ಕಾಡುಗಳಲ್ಲಿ ಯಥೇಚ್ಛವಾಗಿ ಬೆಳೆಯುವ ಪ್ರಮುಖ ಮರ. ವರ್ಷವಿಡೀ ಎಲೆ ತುಂಬಿ ಹಸಿರಾಗಿರುತ್ತದೆ.



ವಿಮಾನ ಸಂಶೋಧನಾ ವಿಭಾಗದಲ್ಲಿ ಬೆಳೆದು ನಿಂತ ಲಕ್ಷ್ಮಿತರು